ಓ.ಎಸ್ಃ 347/2013
ಪಿ.ಡಬ್ಲ್ಯೂಃ 01

<u>ದಿನಾಂಕಃ **10-01-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು</u>

<u>ಮುಂದುವರೆದ ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಎಸ್.ಎ.ವೈ ವಕೀಲರಿಂದಃ</u>

**11**. ಯಂಭತ್ನಾಳದಿಂದ ಹಡಗಲಿಗೆ ಹೊಗುವ ಸರ್ಕಾರಿ ರಸ್ತೆ, ಬಿಜಾಪುರದಿಂದ ದೇವರ-ಹಿಪ್ಪರಗಿಗೆ ಹೋಗುವ ರಾಜ್ಯ ಹೆದ್ದಾರಿಗೆ ಕೂಡುತ್ತದೆ ಎಂದರೆ ಸರಿ. ಯಂಭತ್ನಾಳದಿಂದ ಹಡಗಲಿಗೆ ಹೋಗುವ ರಸ್ತೆಯು ಸ.ನಂಬರ 135 ರಲ್ಲಿ ಕವಲಾಗಿ 2 ರಸ್ತೆಗಳಾಗಿ ಒಂದು ರಸ್ತೆಯು ಶಿವಣಗಿಗೆ ಹೋಗುತ್ತದೆ ಎಂದರೆ ಸರಿ. ಶಿವಣಗಿಗೆ ಹೋಗುವ ರಸ್ತೆಯು ಬಳಕೆ ಇಲ್ಲದ ರಸ್ತೆ ಎಂದರೆ ಸರಿಯಲ್ಲ. ಸದರಿ ರಸ್ತೆಯು ಕೇವಲ ಮಾತಾಳಿರವರ ಅಂದರೆ ಸ.ನಂಬರ 789 ರ ಜಮೀನಿಗೆ ಮಾತ್ರ ಸಂಪರ್ಕ ಕಲ್ಪಿಸುವ ರಸ್ತೆ ಎಂದರೆ ಸರಿಯಲ್ಲ. ಆದ್ದರಿಂದ ಯಂಭತ್ನಾಳ ಗ್ರಾಮದವರು ಸದರಿ ರಸ್ತೆಯನ್ನು ಲಕ್ಕಿಗಿಡದ ರಸ್ತೆ ಎಂದು ಕರೆಯುತ್ತಾರೆ ಎಂದರೆ ಸರಿ. ಸದರಿ ರಸ್ತೆಯನ್ನು ತಪ್ಪಾಗಿ ನಕಾಶೆಯಲ್ಲಿ ರಸ್ತೆ ಎಂದು ತೋರಿಸಲಾಗಿದೆ ಎಂದರೆ ಸರಿಯಲ್ಲ.

**12.** ನನ್ನ ಜಮೀನಿನಲ್ಲಿರುವ ರಸ್ತೆಯನ್ನು ಹೊರತುಪಡಿಸಿ ಸ.ನಂಬರ 193,194,186,188,189,190 ಮತ್ತು 176 ರ ಮಾಲೀಕರು ತಮ್ಮ ಜಮೀನುಗಳಿಗೆ ಹೋಗಲು ಬೇರೆ ಯಾವುದೇ ಪರ್ಯಾಯ ರಸ್ತೆ ಇಲ್ಲ ಎಂದರೆ ಸರಿಯಲ್ಲ. ಬೇರೆ ಡಾಂಬರು ರಸ್ತೆ ಇದೆ ಎಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಸ.ನಂಬರ 193,194,186,188,189,190 ಮತ್ತು 176 ರ ಜಮೀನುಗಳ ಮಾಲೀಕರು ತಮ್ಜ ಪೂರ್ವಜರ ಕಾಲದಿಂದಲೇ ತಮ್ಮ ಜಮೀನಿನಲ್ಲಿರುವ ಕಾಲುದಾರಿಯಲ್ಲಿ (ರಸ್ತೆ) ತಮ್ಮ ಉಳುಮೆಗೆ ಬೇಕಾದ ವಸ್ತುಗಳನ್ನು ಬಂಡಿ, ಟ್ರ್ಯಾಕ್ಟರ ಮತ್ತು ಇನ್ನಿತರ ವಾಹನಗಳನ್ನು ತೆಗೆದುಕೊಂಡು ಹೋಗುತ್ತಿದ್ದರು ಎಂದರೆ ಸರಿಯಲ್ಲ. ಇವತ್ತಿನವರೆಗೂ ಕೂಡಾ

ಅದೇ ರೀತಿ ಸದರಿ ಮಾಲೀಕರು ಕಾಲುದಾರಿಯನ್ನು ಬಳಸುತ್ತಾರೆ ಎಂದರೆ ಸಾಕ್ಷಿಯು ಈ ದಾವೆಯನ್ನು ನಾನು ಸಲ್ಲಿಸಿದ ನಂತರ ಆ ರೀತಿ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ.

**13.** ಸದರಿ ಸ.ನಂಬರ 193,194,186,188,189,190 ಮತ್ತು 176 ರ ಜಮೀನಿನ ಮಾಲೀಕರನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸ.ನಂಬರ 193,194,186,188,189,190 ಮತ್ತು 176 ರ ಜಮೀನಿನುಗಳು ಯಂಭತ್ನಾಳ ಗ್ರಾಮದ ಹದ್ದುಬಸ್ತಿಯಲ್ಲಿದ್ದು, ಅವುಗಳ ನಂತರ ಸದರಿ ಕಾಲುದಾರಿ ಇರುವ ಶಿವಣಗಿ ಗ್ರಾಮದ ಹದ್ದುಬಸ್ತಿಯಲ್ಲಿ ಬರುವ ಇನ್ನುಳಿದ ಜಮೀನುಗಳ ಮಾಲೀಕರು ಕಾಡಾ ಅದೇ ರಸ್ತೆಯನ್ನು ವ್ಯವಸಾಯಕ್ಕೆ ಬಳಸುತ್ತಾರೆ ಎಂದರೆ ಸರಿಯಲ್ಲ.

**14.** 1 ರಿಂದ 36 ಪ್ರತಿವಾದಿಗಳ ಜಮೀನು ಹಡಗಲಿ ಗ್ರಾಮದಲ್ಲಿ ಬರುತ್ತವೆ ಎಂದರೆ ಸರಿಯಲ್ಲ. ಕೆಲವು ಜಮೀನುಗಳು ನೇಗಿನಾಳ ಗ್ರಾಮದಲ್ಲಿ ಬರುತ್ತವೆ. ನನಗೆ ನಿಖರವಾಗಿ ದಾಖಲೆಗಳನ್ನು ನೋಡದೆ ಯಾವ ಜಮೀನುಗಳು ನೇಗಿನಾಳ ಗ್ರಾಮದಲ್ಲಿ ಬರುತ್ತದೆ ಎಂದು ಹೇಳಲು ಬರುವುದಿಲ್ಲ. ನಾನು ಈ ರೀತಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**15.** ಸ.ನಂಬರ 184/ಬ/1 ಬ ಜಮೀನು 16 ಎಕರೆ 5 ಗುಂಟೆ ವಿಸ್ತೀರ್ಣ ಹೊಂದಿದ್ದು ಅದರಲ್ಲಿ 5 ಗುಂಟೆ ಖರಾಬು ಜಮೀನು ಇದೆ ಎಂದರೆ ಸರಿ. ನಾನು ಸಲ್ಲಿಸಿದ ಕಚ್ಚಾ ನಕಾಶೆಯಲ್ಲಿ ತೋರಿಸಿದ ಕಾಲುದಾರಿ ನನ್ನ ಜಮೀನಿನಲ್ಲಿ ಎಷ್ಟು ಉದ್ದ ಮತ್ತು ಎಷ್ಟು ಅಗಲವಿದೆ ಎಂದು ನಾನು ಅಳತೆ ಮಾಡಿಸಿಲ್ಲ. ನನ್ನ ಜಮೀನು ರಸ್ತೆ ಗುಂಟಾ ಅಂದಾಜು 600 ಫೂಟ್ ಇರತ್ತದೆ. ನನ್ನ ಜಮೀನಿನಲ್ಲಿ ಕಾಲುದಾರಿಯನ್ನು ಹೊರತುಪಡಿಸಿ ಬೇರೆ ಖರಾಬು ಜಮೀನು ಇರುವ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಜಮೀನಿನಲ್ಲಿರುವ ಕಾಲುದಾರಿಯೇ

ಪಹಣಿ ಪತ್ರಿಕೆಯಲ್ಲಿ ತೋರಿಸಿದ 5 ಗುಂಟೆ ಖರಾಬು ಜಮೀನು ಎಂದರೆ ನನಗೆ ಮಾಹಿತಿ ಇಲ್ಲ.

**16.** ನನ್ನ ಜಮೀನು ಇರುವ ಸ.ನಂಬರ ಒಟ್ಟು 53 ಎಕರೆ ಜಮೀನು ಇದ್ದು, ಅದರಲ್ಲಿ ನನ್ನ ಜಮೀನಿನ ಹದ್ದುಬಸ್ತನ್ನು ಇನ್ನೂ ನಾನು ಗುರುತಿಸಿಕೊಂಡಿರುವುದಿಲ್ಲ. ನನ್ನ ಜಮೀನಾದ 16 ಎಕರೆ 5 ಗುಂಟೆ ಜಮೀನಿನ 11(E) ಶೀಟ್ ಇಲ್ಲ. ಅದು ಇಲ್ಲದೆಯೆ ನಾನು ಈ ದಾವೆಯನ್ನು ಸಲ್ಲಿಸಿರುತ್ತೇನೆ.

**<u>ನ್ಯಾಯಾಲಯದ ಪ್ರಶ್ನೆಃ</u>**

**ಪ್ರಶ್ನೆಃ** ನೀವು ಹದ್ದುಬಸ್ತನ್ನು ಗುರುತಿಸಿಕೊಳ್ಳದೇ ಈ ದಾವೆಯನ್ನು ಹೇಗೆ ಸಲ್ಲಿಸಿದ್ದೀರಾ?

**ಉತ್ತರಃ** ನಾನು ಈ ದಾವೆಯನ್ನು ನಾನು ಸ್ವಾಧೀನಾನುಭೋಗದಲ್ಲಿರುವ ಜಮೀನಿನ ಹದ್ದುಬಸ್ತನ್ನು ನಾನೇ ಗುರುತಿಸಿಕೊಂಡು ಸಲ್ಲಿಸಿರುತ್ತೇನೆ.

**17.** ನಾನು ದಾವೆಯವು ಜೊತೆ ಸಲ್ಲಿಸಿದ ಕಚ್ಚಾ ನಕ್ಷೆಯು 53 ಎಕರೆಯನ್ನು ತೋರಿಸುವ ನಕ್ಷೆಯಾಗಿರುತ್ತದೆ. ಸದರಿ ನಕ್ಷೆಯಲ್ಲಿ ನನ್ನ ಜಮೀನಿನ ಅಸ್ಥಿತ್ವವನ್ನು ನಾನು ತೋರಿಸಿಲ್ಲ. ನನ್ನ ಜಮೀನಿನಲ್ಲಿ ಬರುವ ಕಾಲುದಾರಿಯ ಒಟ್ಟು ವಿಸ್ತೀರ್ಣ ಎಷ್ಟು ಎಂದು ನನಗೆ ಗೊತ್ತಿಲ್ಲ. ನಾನು ಸಲ್ಲಿಸಿದ ಕಚ್ಚಾ ನಕ್ಷೆಯಲ್ಲಿ ABCDEFG ಎಂದು ಗುರುತಿಸಿದ ಜಮೀನು ಒಟ್ಟು 53 ಎಕರೆ ಜಮೀನು. ಸದರಿ ಜಮೀನಿನಲ್ಲಿ ನನ್ನ ಸ.ನಂಬರ 184ಬ/1ಬ ಜಮೀನು 16 ಎಕರೆ 5 ಗುಂಟೆ ಜಮೀನು ಎಲ್ಲಿ ಬರುತ್ತದೆ ಎಂದು ನಾನು ತೋರಿಸಿಲ್ಲ. ನನ್ನ ಜಮೀನಿನ ನಂತರ ಕಾಲುದಾರಿ ಹಾದು ಹೋಗುವ ಜಮೀನಿನ ಸ.ನಂಬರ ನನಗೆ ಗೊತ್ತಿಲ್ಲ. ನನ್ನ ಜಮೀನನ್ನು ಪ್ರತ್ಯೇಕವಾಗಿ ತೋರಿಸದೇ ಇದ್ದಿದ್ದರಿಂದ ಸಂಪೂರ್ಣ ಸ.ನಂಬರ 184 ರಲ್ಲಿ ಹಾದುಹೋಗುವ

ಕಾಲುದಾರಿಯ ಬಗ್ಗೆ ನಾನು ದಾವೆ ಸಲ್ಲಿಸಲು ಯಾವುದೇ ಅಧಿಕಾರ ಹೊಂದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೆ.**

**(ತೇಜಸ್ವಿನಿ ಸೊಗಲದ)**
**ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,**
**ಬಸವನ ಬಾಗೇವಾಡಿ.**